ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
KARNATAK UNIVERSITY, DHARWAD
NAAC Accredited with "A" Grade 2022
"UNIVERSITY WITH POTENTIAL FOR EXCELLENCE"
ಸಾಮಾನ್ಯ ಆಡಳಿತ ವಿಭಾಗ
G.A.D.

"Diamond Jubilee Year
1949-2009"
"ವಜ್ರ ಮಹೋತ್ಸವ ವರ್ಷ
1949–2009"

Azadi Ka Amrit Mahotsav

ಪಾವಟೆನಗರ, ಧಾರವಾಡ.
Pavate Nagar, Dharwad.
ದೂರವಾಣಿ ಸಂ.0836–2215358
Tel Ph. No.0836–2215358
Website : **www.kud.ac.in**

ಕೆಯು/ಜಿಎಡಿ/ಅಗೃ/2025–26/ ದಿನಾಂಕ: 04.03.2026

## ಪ್ರಕಟಣೆ

ವಿಷಯ: ಕರ್ನಾಟಕ ವಿಶ್ವವಿದ್ಯಾಲಯ ಅತಿಥಿಗೃಹದ ಬೋಜನಾಲಯದ ಸೇವೆಯನ್ನು ಒದಗಿಸಲು ದರಪಟ್ಟಿ ಸಲ್ಲಿಸುವ ಕುರಿತು.

ಉಲ್ಲೇಖ: ಕುಲಪತಿಗಳ ಆದೇಶ ದಿನಾಂಕ:24.02.2026

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ಹೊಸ/ಹಳೆಯ ಅತಿಥಿಗೃಹದ ಬೋಜನಾಲಯದ 11 ತಿಂಗಳು ಸೇವೆಯನ್ನು ಒದಗಿಸಲು ದರಪಟ್ಟಿ ಸಲ್ಲಿಸಲು ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರ ಹೆಸರಿನಲ್ಲಿ ಈ ಪತ್ರದೊಂದಿಗೆ ಲಗತ್ತಿಸಿದ ಟೆಂಡರ್ ಫಾರ್ಮಗಳನ್ನು ಡೌನ್‌ಲೋಡ್ ಮಾಡಿಕೊಂಡು ಮೊಹರಬಂದ ಲಕೋಟೆಯಲ್ಲಿ ದಿನಾಂಕ ದಿನಾಂಕ:18.03.2026 ರ ಒಳಗಾಗಿ ಕವಿವಿ ಸಾಮಾನ್ಯ ಆಡಳಿತ ವಿಭಾಗಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

Sd
ಉಪಕುಲಸಚಿವರು

## ಟೆಂಡರ ಫಾರ್ಮ -1

ಕರ್ನಾಟಕ ವಿಶ್ವವಿದ್ಯಾಲಯದ ಅತಿಥಿಗೃಹದ ಭೋಜನಾಲಯವನ್ನು ಹನ್ನೊಂದು ತಿಂಗಳ (11) ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಿಕೊಂಡು ಹೋಗುವ ಸಲುವಾಗಿ ಟೆಂಡರ್.

1. ಪೂರ್ಣ ಹೆಸರು:

2. ಪೂರ್ಣ ವಿಳಾಸ:

3. ವಯಸ್ಸು:

4. ಪ್ರಸ್ತುತ ಯಾವುದಾದರೂ ಭೋಜನಾಲಯ ನಿರ್ವಹಿಸುತ್ತಿದ್ದರೆ ಅದರ ಪೂರ್ಣ ಮಾಹಿತಿ (ದಾಖಲೆ ಸಹಿತ):

5. ಈ ಮೊದಲು ಭೋಜನಾಲಯ ನಿರ್ವಹಿಸಿದ್ದರೆ ಅದರ ಪೂರ್ಣ ಮಾಹಿತಿ (ದಾಖಲೆ ಸಹಿತ):

6. ಫುಡ್ ಲೈಸನ್ಸ್ ಹೊಂದಿದ್ದರೆ ಅದರ ಟಿನ್ ನಂ/ಜಿ.ಎಸ್.ಟಿ ಸಹಿತ:

ನಾನು ಇಲ್ಲಿ ಕೊಟ್ಟ ಹೇಳಿಕೆ ಹಾಗೂ ಉತ್ತರಗಳು ಸತ್ಯವಿದ್ದು ಮತ್ತು ನಾನು ವಿಶ್ವವಿದ್ಯಾಲಯದ ನಿಯಮ/ಕರಾರುಗಳಿಗೆ ಒಪ್ಪಿರುತ್ತೇನೆ.

ಸ್ಥಳ :

ದಿನಾಂಕ :

ಗುತ್ತಿಗೆದಾರರ ಸಹಿ

<u>ಟೆಂಡರ್ ಫಾರ್ಮ -2</u>

ಗುತ್ತಿಗೆ ಆಧಾರದ ಮೇಲೆ ಹನ್ನೊಂದು (11) ತಿಂಗಳ ಅವಧಿಗೆ ಕರ್ನಾಟಕ ವಿಶ್ವವಿದ್ಯಾಲಯದ ಅತಿಥಿಗೃಹದ ಭೋಜನಾಲಯ ನಿರ್ವಹಿಸಿಕೊಂಡು ಹೋಗುವ ಬಗ್ಗೆ ಟೆಂಡರ್

| ಅ.ನಂ. | ವಿವರಗಳು | ಪ್ರತಿತಿಂಗಳು ಬಾಡಿಗೆ (ಅಂಕಿಯಲ್ಲಿ) | ಪ್ರತಿತಿಂಗಳು ಬಾಡಿಗೆ (ಅಕ್ಷರದಲ್ಲಿ) |
|---|---|---|---|
| 1 | ಗುತ್ತಿಗೆ ಆಧಾರದ ಮೇಲೆ ಹನ್ನೊಂದು (11) ತಿಂಗಳ ಅವಧಿಗೆ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿರುವ ಅತಿಥಿ ಗೃಹದ ಭೋಜನಾಲಯ ನಿರ್ವಹಿಸಿಕೊಂಡು ಹೋಗುವದು. | ರೂ.5000/- | ಐದು ಸಾವಿರ ರೂಪಾಯಿಗಳು ಮಾತ್ರ. |

ಗುತ್ತಿಗೆದಾರರ ಸಹಿ

<u>ಘೋಷಣಾ ಪತ್ರ</u>

ಕರ್ನಾಟಕ ವಿಶ್ವವಿದ್ಯಾಲಯ ನಿಗದಿಪಡಿಸಿದ ಸ್ಥಳೀಯ ನಿಬಂಧನೆಗಳಿಗೆ ಒಳಪಡುತ್ತೇನೆ ಹಾಗೂ ಅದರಂತೆ ಸಹಕರಿಸುತ್ತೇನೆಂದು ಈ ಮೂಲಕ ನಾನು ಘೋಷಿಸುತ್ತೇನೆ.

ಸ್ಥಳ :

ದಿನಾಂಕ: ಗುತ್ತಿಗೆದಾರರ ಸಹಿ

## ಟೆಂಡರ್ ಫಾರ್ಮ -3

ಈ ಕೆಳಗೆ ವಿವರಿಸಿದಂತೆ ಊಟ ಹಾಗೂ ಉಪಹಾರ ತಯಾರಿಸಿ ಸರಬರಾಜು ಮಾಡಲು ದರಪಟ್ಟಿಯನ್ನು ಸಲ್ಲಿಸತಕ್ಕದ್ದು.

### ಸಸ್ಯಾಹಾರಿ ಸಾದಾ ಊಟ:

1. ಚಪಾತಿ / ರೊಟ್ಟಿ / ಪುರಿ (ಯಾವುದಾದರೂ ಒಂದು)
2. ಕಾಯಿಪಲ್ಲೆ – (ಎರಡು ತರಹದ ಮಾತ್ರ)
3. ಅನ್ನ
4. ಬೇಳೆ ಸಾರು
5. ಮೊಸರು (ಒಂದು ಕಪ್ಪು)
6. ಹಪ್ಪಳ
7. ಸಲಾಡ್ (ಸವತಿಕಾಯಿ, ಗಜ್ಜರಿ ಮುಂತಾದುವುಗಳದು.)

ಒಂದು ಪ್ಲೇಟಿನ ಬೆಲೆ ರೂ.......................................

### ಸಸ್ಯಾಹಾರಿ ಸ್ಪೇಶಲ್ ಊಟ:

1. ಸೂಪ್ (ಒಂದು ಬಟ್ಟಲು)
2. ಚಪಾತಿ /ರೊಟ್ಟಿ /ಪರೋಠಾ /ಪುರಿ (ಯಾವುದಾದರೂ ಎರಡು ಮಾತ್ರ)
3. ಕಾಯಿಪಲ್ಲೆ – (ಮೂರು ತರಹದವುಗಳು)
4. ಪಲಾವ್ – (ಉತ್ತಮ ಮಟ್ಟದ ಬಾಸುಮತಿ ಅಕ್ಕಿಯಿಂದ ಮಾಡಿದ್ದು)
5. ಅನ್ನ
6. ಸಾರು
7. ಮೊಸರು (ಒಂದು ಕಪ್ಪು)
8. ಚಟ್ನಿ (ಎರಡು ನಮೂನೆಯವುಗಳು)
9. ಸಲಾಡ್ (ಸವತಿಕಾಯಿ, ಗಜ್ಜರಿ ಮುಂತಾದವುಗಳದ್ದು)
10. ಉಪ್ಪಿನಕಾಯಿ
11. ಸ್ವೀಟ್ಸ್ (ಒಂದು ಪ್ಲೇಟ್ ಯಾವುದಾದರೂ ಒಂದು)

ಒಂದು ಪ್ಲೇಟಿನ ಬೆಲೆ ರೂ.......................................

### ನಾನ್ ವೆಜ್ ಊಟದ ವಿವರಗಳು :

1. ಮಟನ್ ಥಾಲಿ (ಮಟನ್ ಕರಿ, ರೊಟ್ಟಿ/ಚಪಾತಿ, ಅನ್ನ, ಸಲಾಡ್) ______________ ರೂ:
2. ಚಿಕನ್ ಥಾಲಿ (ಚಿಕನ್ ಕರಿ, ರೊಟ್ಟಿ/ಚಪಾತಿ, ಅನ್ನ, ಸಲಾಡ್) ರೂ:
3. ಫಿಶ್ ಥಾಲಿ (ಫಿಶ್ ಕರಿ, ರೊಟ್ಟಿ/ಚಪಾತಿ, ಅನ್ನ, ಸಲಾಡ್) ರೂ:
4. ಎಗ್ಗ ಥಾಲಿ (ಎರಡು ತತ್ತಿಗಳನ್ನೊಳಗೊಂಡ ಕರಿ, ರೊಟ್ಟಿ/ಚಪಾತಿ,ಅನ್ನ ಸಲಾಡ್ ರೂ:
5. ಮಟನ್ (1 ಕೆ.ಜಿ.) ರೂ.
6. ಚಿಕನ್ (1 ಕೆ.ಜಿ.) ರೂ.
7. ಫಿಶ್ ಫ್ರೈ (1 ಪ್ಲೇಟ್) ರೂ.

<u>ಉಪಹಾರ ವಿವರಗಳು</u>

| | | |
|---|---|---|
| 1 | ಚಹಾ (ಒಂದು ಕಪ್ಪು) | ರೂ: |
| 2 | ಕೆ.ಟಿ. ಸಕ್ಕರೆ ಸಹಿತ/ಸಕ್ಕರೆ ರಹಿತ (ಒಂದು ಕಪ್ಪು) | ರೂ: |
| 3 | ಪಾಟ್ ಸರ್ವಿಸ್ ಚಹ (ಎರಡು ಕಪ್ಪು) | ರೂ: |
| 4 | ಕಾಫಿ (ಇನ್‌ಸ್ಟಂಟ್) (ಒಂದು ಕಪ್ಪು) | ರೂ: |
| 5 | ಹಾಲು (ಒಂದು ಕಪ್ಪು) | ರೂ: |
| 6 | ಕಾಫಿ (ಫಿಲ್ಟರ) (ಒಂದು ಕಪ್ಪು) | ರೂ: |
| 7 | ಬೋರ್ನವಿಟಾ (ಒಂದು ಕಪ್ಪು) | ರೂ: |
| 8 | ಕಾರ್ನ ಫ್ಲೇಕ್ (ಹಾಲಿನೊಂದಿಗೆ)<br>(ಒಂದು ಸ್ಟ್ಯಾಂಡರ್ಡ ಬಟ್ಟಲು) | ರೂ: |
| 9 | ಬ್ರೆಡ್ (ನಾಲ್ಕು ಸ್ಲಾಯಿಸಗಳು ಸಾದಾ ಬೇಯಿಸಿದ್ದು) | ರೂ: |
| 10 | ಅಮ್ಲೇಟ್ (ಎರಡು ತತ್ತಿಗಳು) | ರೂ: |
| 11 | ತತ್ತಿಗಳು (ಎರಡು ಕುದಿಸಿದ್ದು) | ರೂ: |
| 12 | ಉಪ್ಪಿಟ್ಟು / ಅವಲಕ್ಕಿ (ಒಂದು ಪ್ಲೇಟ್) | ರೂ: |
| 13 | ಇಡ್ಲಿ ಎರಡು ಸ್ಟ್ಯಾಂಡರ್ಡ ಸಾಯಿಜ್ +<br>ಕೊಬ್ಬರಿ ಚಟ್ನಿ + ಸಾಂಬಾರ | ರೂ: |
| 14 | ಉದ್ದಿನವಡಾ (ಒಂದು) + ಚಟ್ನಿ+ ಸಾಂಬಾರ | ರೂ: |
| 15 | ಪೂರಿ (ನಾಲ್ಕು) + ಬಟಾಟೆ ಪಲ್ಲೆ +ಚಟ್ನಿ | ರೂ: |
| 16 | ದೋಸೆ (ಒಂದು) + ಕೊಬ್ಬರಿ ಚಟ್ನಿ +ಬಟಾಟೆ ಪಲ್ಲೆ | ರೂ: |
| 17 | ಬಜಿ (ಒಂದು ಪ್ಲೇಟ್) | ರೂ: |
| 18 | ತಂಪು ಪಾನೀಯಗಳು ಒಂದಕ್ಕೆ (ಪ್ರಸಕ್ತ ಮಾರ್ಕೆಟ್ ದರದಂತೆ) (ಪೆಪ್ಸಿ, ಕೋಕಾಕೋಲಾ ಮುಂತಾದುವುಗಳು) | ರೂ: |

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಅತಿಥಿ ಗೃಹದ ಭೋಜನಾಲಯವನ್ನು ನಡೆಸಲು ಕರಾರುಗಳು

1. ಕ.ವಿ.ವಿ ಅತಿಥಿ ಗೃಹದ ಭೋಜನಾಲಯ ನಡೆಸುವುದಕ್ಕೆ ಟೆಂಡರ್ ನಂ: ______________________ ದಿನಾಂಕ: _____ ಹಾಗೂ ಕಛೇರಿ ಆದೇಶ ಸಂಖ್ಯೆ: ____________ , ದಿನಾಂಕ: __________ ರ ಮುಖಾಂತರ ಗುತ್ತಿಗೆ ಪಡೆದಿರುವುದಕ್ಕೆ ಸದರ ಕಟ್ಟಡದಲ್ಲಿ ಕೇವಲ ಭೋಜನಾಲಯ ಬಾಡಿಗೆ ನಾತೆಯಿಂದ ವ್ಯವಹಾರ ನಡೆಸುತ್ತೇವೆ.

2. ಕೊಠಡಿಗಳಲ್ಲಿದ್ದ ಹಾಗೂ ಇತರ ಅತಿಥಿಗಳಿಗೆ ಊಟ ಹಾಗೂ ಉಪಹಾರವನ್ನು ಪೂರೈಸುವ ವ್ಯವಸ್ಥೆಯನ್ನು ಗುತ್ತಿಗೆದಾರರಾದ ನಾವು ಅಥವಾ ನಮ್ಮ ಕೆಲಸಗಾರರಿಂದ ಹಾಗೂ "ವಿಶ್ವವಿದ್ಯಾಲಯದ ಅತಿಥಿಗಳು" ಕೊಠಡಿಯಲ್ಲಿ ತಂಗಿದಾಗ ಪೂರ್ವ ನಿಯೋಜಿತವಾಗಿ ಅವರ ಊಟ/ಉಪಹಾರದ/ನೀರಿನ ಬಾಟಲಿಗಳ ವ್ಯವಸ್ಥೆಯನ್ನು ನಮಗೆ ಸೂಚಿಸಿದಂತೆ ನಾವೇ ಒದಗಿಸುತ್ತೇವೆ. ಅದಕ್ಕಾಗಿ ಅತಿಥಿಗೃಹದಲ್ಲಿ ಕಾರ್ಯನಿರತ ಗುತ್ತಿಗೆ ಆಧಾರಿತ ಸಿಬ್ಬಂದಿಗಳ ಸೇವೆಯನ್ನು ಪಡೆಯುವುದಿಲ್ಲ.

3. ಕೊಠಡಿಯಲ್ಲಿದ್ದ ಹಾಗೂ ಇತರ ಅತಿಥಿಗಳಿಗೆ ಊಟ ಹಾಗೂ ಉಪಹಾರವನ್ನು ಪೂರೈಸುವ ವ್ಯವಸ್ಥೆಯನ್ನು ಮಾಡುತ್ತೇವೆ ಮತ್ತು ನಮ್ಮ ಗುತ್ತಿಗೆ ಅವಧಿಯಲ್ಲಿ ಯಾವುದೇ ಕಾರಣಗಳನ್ನು ನೀಡದೇ ಮೆಸ್ ಸೇವೆಯನ್ನು ಸ್ಥಗಿತಗೊಳಿಸುವುದಿಲ್ಲ. ಒಂದು ವೇಳೆ ಸ್ಥಗಿತಗೊಳಿಸುವ ಸಂದರ್ಭ ಬಂದರೆ 3 ತಿಂಗಳ ಮುಂಚೆಯೇ ಆಡಳಿತದ ಗಮನಕ್ಕೆ ಲಿಖಿತದಲ್ಲಿ ತಿಳಿಸುತ್ತೇವೆ. ಈ ಕರಾರು ಉಲ್ಲಂಘನೆಯಾದಲ್ಲಿ ನಾವು ಭರಿಸಿದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಲು ನಮ್ಮ ಅಭ್ಯಂತರ ಇರುವುದಿಲ್ಲ.

4. ಗುತ್ತಿಗೆ ಅವಧಿಯ ಮಟ್ಟಿಗೆ ಮಾತ್ರ ಭೋಜನಾಲಯ ನಡೆಸುತ್ತೇವೆ. ಗುತ್ತಿಗೆ ಅವಧಿಯು ಮುಗಿದ ನಂತರ ಅಥವಾ ಕಾರಣಾಂತರದಿಂದ ವಿಶ್ವವಿದ್ಯಾಲಯವು ಗುತ್ತಿಗೆಯ ಅವಧಿಯನ್ನು ರದ್ದು ಮಾಡಿದರೆ ಕೂಡಲೇ ನಾವು ಅದನ್ನು ಖಾಲಿ ಮಾಡಿ ವಿಶ್ವವಿದ್ಯಾಲಯಕ್ಕೆ ಒಪ್ಪಿಸುತ್ತೇವೆ. ವಿಶ್ವವಿದ್ಯಾಲಯದ ಕುಲಸಚಿವರು/ಕುಲಪತಿಗಳು ಅಥವಾ

ಕಾರ್ಯಾಲಯಗಳಿಂದ ಲಿಖಿತವಾಗಿ ನೀಡುವ ಆದೇಶಗಳನ್ನು ರಜೆ ದಿನಗಳಲ್ಲಿಯೂ ತಪ್ಪದೇ ಪಾಲಿಸುತ್ತೇವೆ.

5. ಟೆಂಡರು ಮಂಜೂರು ಆದ ಬಳಿಕ ಭೋಜನಾಲಯವನ್ನು ವಿಶ್ವವಿದ್ಯಾಲಯವು ನಿಗದಿ ಪಡಿಸಿದ ತಾರೀಖಿಗೆ ತೆರೆಯದಿದ್ದರೆ ಈ ಠೇವಣಿ ಹಣ ರೂ.10,000/- ಗಳನ್ನು ಮುಟ್ಟುಗೋಲು ಹಾಕಲು ನಮ್ಮ ಅಭ್ಯಂತರ ಇರುವುದಿಲ್ಲ.

6. ಭೋಜನಾಲಯ ಪ್ರಾರಂಭ ಮಾಡಿದ ದಿನದಿಂದ ಪ್ರತಿ ತಿಂಗಳು ಬಾಡಿಗೆ ಹಣ ರೂ.5,000/- ಗಳನ್ನು ಪ್ರತೀ ತಿಂಗಳ 5 ನೇ ತಾರೀಖಿನೊಳಗಾಗಿ ಬ್ಯಾಂಕಿಗೆ ಚಲನ ಮುಖಾಂತರ ಭರಿಸಿ ಅದರ ಒಂದು ಪ್ರತಿಯನ್ನು ಅತಿಥಿಗೃಹದ ಕಾರ್ಯ ನಿರ್ವಾಹಕರು, ಜಿ.ಎ.ಡಿ ವಿಭಾಗಕ್ಕೆ ಸಲ್ಲಿಸುತ್ತೇವೆ.

7. ವಿಶ್ವವಿದ್ಯಾಲಯವು ಸೂಚಿಸಿದಂತೆ ಭೋಜನಾಲಯ ಕಟ್ಟಡದಲ್ಲಿ ಕಟ್ಟಿಗೆ ಉರುವಲು ಉಪಯೋಗಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸುತ್ತೇವೆ.

8. (ಅ) ವಿಶ್ವವಿದ್ಯಾಲಯವು ಒದಗಿಸುವ ಈ ಕೆಳಗೆ ವಿವರಿಸಿದ ಸೌಲಭ್ಯಗಳನ್ನು ಯಾವುದೇ ಕಾರಣಗಳಿಗೂ ವ್ಯಯವಾಗುವಂತೆ/ಹಾನಿಯಾಗದಂತೆ ಉಪಯೋಗಿಸುತ್ತೇವೆ.

1) ನೀರಿನ ಪೂರೈಕೆ

2) ವಿದ್ಯುತ್ ಪೂರೈಕೆ

3) ಪಿಠೋಪಕರಣ

(ಬ) ಅವಶ್ಯವಿರುವ ಎಲ್ಲ ಪಾತ್ರೆಗಳು ಹಾಗೂ ಕ್ರಾಕರೀಜ್‌ಗಳನ್ನು ನಾವೇ ತಂದು ಭೋಜನಾಲಯವನ್ನು ನಿರ್ವಹಿಸುತ್ತೇವೆ.

9. ವಿಶ್ವವಿದ್ಯಾಲಯವು ಕಾಲಕಾಲಕ್ಕೆ ನೀಡುವ ನಿಯಮಗಳಂತೆ/ ಸೂಚನೆಯ ಪ್ರಕಾರ ಭೋಜನಾಲಯವನ್ನು ಚಾಚುತಪ್ಪದೇ ನಡೆಸಿಕೊಂಡು ಹೋಗುತ್ತೇನೆ.

10. ವಿಶ್ವವಿದ್ಯಾಲಯವು ಅವಶ್ಯವೆನಿಸಿದಲ್ಲಿ ಒಂದು ತಿಂಗಳ ಪೂರ್ವ ಸೂಚನೆಯನ್ನು ಕೊಟ್ಟು, ಕರಾರಿನ ಅವಧಿಯ ಪೂರ್ವದಲ್ಲಿಯೇ ಗುತ್ತಿಗೆಯನ್ನು ರದ್ದು ಪಡಿಸಿ ಭೋಜನಾಲಯವನ್ನು ತೆರವು ಮಾಡಿಸುವ ಹಾಗೂ ಅಂಥ ಸಂದರ್ಭದಲ್ಲಿ ಗುತ್ತಿಗೆದಾರನಿಗೆ/ಲೈಸನ್ಸದಾರರಿಗೆ ಯಾವುದೇ ಬಗೆಯ ಪರಿಹಾರ ಪಡೆಯುವ ಹಕ್ಕು ಇರುವುದಿಲ್ಲವೆಂಬ ಕರಾರಿಗೆ ಒಪ್ಪಿಕೊಂಡಿರುತ್ತೇನೆ.

11. ವಿಶ್ವವಿದ್ಯಾಲಯದ ಅಧಿಕಾರಿಯವರು ಆಗಾಗ ಭೋಜನಾಲಯಕ್ಕೆ ಭೇಟಿ ಕೊಟ್ಟು ಅದರ ಸ್ವಚ್ಚತೆ, ಆಹಾರದ ಗುಣಮಟ್ಟ, ಪ್ರಮಾಣ ಮತ್ತು ಇನ್ನಿತರ ವಿಷಯಗಳ ಬಗ್ಗೆ ಪರಿಶೀಲಿಸಿ, ಸರಿ ಕಂಡ ಸಲಹೆ ಸೂಚನೆಗಳನ್ನು ಕೊಟ್ಟಲ್ಲಿ ಅದನ್ನು ಅವಶ್ಯವೆನಿಸಿದ ಇತರೇ ಕ್ರಮಗಳನ್ನು ಜರುಗಿಸಲು ನಮ್ಮ ಒಪ್ಪಿಗೆ ಇರುತ್ತದೆ.

12. ಬೋಜನಾಲಯದ ಸೇವೆಯನ್ನು ಒದಗಿಸುವಾಗ ಬಾಲಕಾರ್ಮಿಕರ ಸೇವೆಯನ್ನು ಉಪಯೋಗಿಸಿಕೊಳ್ಳುವದಿಲ್ಲ.

13. ವಿಶ್ವವಿದ್ಯಾಲಯದ ಘಟಿಕೋತ್ಸವ ಹಾಗೂ ಇತರ ಪ್ರಮುಖ ಕಾರ್ಯಕ್ರಮಗಳು ಜರುಗುವ ಸಂದರ್ಭದಲ್ಲಿ ಗಣ್ಯಾತಿಗಣ್ಯ ಅತಿಥಿಗಳು ಅತಿಥಿಗೃಹದಲ್ಲಿ ತಂಗಿದಾಗ ಸೂಕ್ತ ಊಟ/ಉಪಹಾರ ವ್ಯವಸ್ಥೆಯೊಂದಿಗೆ ಶಿಷ್ಟಾಚಾರವನ್ನು ಪಾಲಿಸುತ್ತೆನೆ ಹಾಗೂ ಅಂತಹ ಸಂದರ್ಭಗಳಲ್ಲಿ ಯಾವುದೇ ಊಟ/ಉಪಹಾರ ವ್ಯವಸ್ಥೆಯಲ್ಲಿ ಎನೂ ಅವ್ಯವಸ್ಥೆ ಆಗದಂತೆ ನೋಡಿಕೊಳ್ಳುತ್ತೆನೆ.

ಗುತ್ತಿಗೆದಾರರು

ಇತರೆ ಕರಾರುಗಳು

1. ಯಾವುದೇ ವಿಷಯಗಳ ಬಗ್ಗೆ ತಕರಾರು ಬಂದಲ್ಲಿ ಅದನ್ನು ವಿಚಾರಿಸುವ ಮತ್ತು ಕ್ರಮ ತೆಗೆದುಕೊಳ್ಳುವ ಅಧಿಕಾರ ವಿಶ್ವವಿದ್ಯಾಲಯಕ್ಕೆ ಇರುತ್ತದೆಂಬುದನ್ನು ಒಪ್ಪುತ್ತೇವೆ.
2. ಟೆಂಡರ ಸ್ವೀಕೃತವಾಗಿ ಭೋಜನಾಲಯವನ್ನು ಪಡೆದ ನಾವು ಕಟ್ಟಡಕ್ಕೆ ಏನಾದರೂ ಧಕ್ಕೆ ಅಥವಾ ಹಾನಿ ಮಾಡಿದ ಪಕ್ಷದಲ್ಲಿ ವಿಶ್ವವಿದ್ಯಾಲಯ ನಿರ್ಣಯಿಸಿದ ಪ್ರಕಾರ ಪರಿಹಾರವನ್ನು ವಿಶ್ವವಿದ್ಯಾಲಯಕ್ಕೆ ಭರಿಸಲು ಸಿದ್ಧರಿದ್ದೇವೆ.
3. ಭೋಜನಾಲಯದ ನಿಯಂತ್ರಣ ಮೇಲ್ವಿಚಾರಣೆ ವಿಶ್ವವಿದ್ಯಾಲಯದ ಆಧಿಕಾರಕ್ಕೆ ಒಳಪಟ್ಟಿರುತ್ತದೆ.
4. ಭೋಜನಾಲಯದ ಸೇವೆಯನ್ನು ವಿಶ್ವವಿದ್ಯಾಲಯದ ಅಧಿಕೃತ ವ್ಯಕ್ತಿಗಳಿಗೆ ಮಾತ್ರ ಒದಗಿಸತಕ್ಕದ್ದು.
5. ಕರಾರಿನ ಅವಧಿಯು ಹನ್ನೊಂದು (11) ತಿಂಗಳು ಮಾತ್ರ ಇರುತ್ತದೆ.
6. ಈ ಕರಾರುಗಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡಲ್ಲಿ ಯೋಗ್ಯವೆನಿಸಿದ ದಂಡ ವಿಧಿಸಲು ವಿಶ್ವವಿದ್ಯಾಲಯವು ಅಧಿಕಾರ ಹೊಂದಿದೆ.
7. ಭೋಜನಾಲಯ ಹಾಗೂ ಸುತ್ತಲಿನ ಪರಿಸರವನ್ನು ಕಡ್ಡಾಯವಾಗಿ ಸ್ವಚ್ಛವಾಗಿಟ್ಟುಕೊಳ್ಳುತ್ತೇವೆ.
8. ಭೋಜನಾಲಯವು ಅತಿಥಿ ಗೃಹದ ಕೋಣೆಗಳ ಮಧ್ಯ ಇರುವುದರಿಂದ ಅತಿಥಿಗೃಹದಲ್ಲಿರುವವರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ನೋಡಿಕೊಳ್ಳುತ್ತೇವೆ.
9. ವಿಶ್ವವಿದ್ಯಾಲಯದ ಅನುಮತಿ ಪಡೆಯದೇ ಹೊರಗಿನವರು ಏರ್ಪಡಿಸಿದ ಯಾವುದೇ ಸಂತೋಷ ಕೂಟದಲ್ಲಿ ಊಟ ಅಥವಾ ಉಪಹಾರ ಸರಬರಾಜು ಮಾಡುವುದಿಲ್ಲ.
10. ಅತಿಥಿ ಗೃಹಗಳ ಕೊಠಡಿಗಳಲ್ಲಿ ಹಾಗೂ ಊಟದ ಗೃಹದಲ್ಲಿ ಮದ್ಯವನ್ನು ಸರಬರಾಜು/ಮಧ್ಯಪಾನ ಮಾಡುವುದನ್ನು ಹಾಗೂ ಧೂಮಪಾನ ಸಾಮಗ್ರಿ ಬಳಕೆ ಸಂಪೂರ್ಣ ನಿಷೇಧಿಸಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯವು ವಿಧಿಸಿದ ಈ ಮೇಲಿನ ಕರಾರುಗಳಿಗೆ ನಾನು ಆತ್ಮಸಾಕ್ಷಿಯಾಗಿ ಸಂಪೂರ್ಣವಾಗಿ ಒಪ್ಪಿಕೊಂಡು ಈ ಛಾಪಾ ಕಾಗದದ ಮೇಲೆ ನೋಟರಿಯೊಂದಿಗೆ ಸಹಿಮಾಡಿರುತ್ತೇನೆ.

ಸಾಕ್ಷಿದಾರರು:

ಹೆಸರು, ವಿಳಾಸ ಗುತ್ತಿಗೆ ದಾರರ ಸಹಿ